# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1133
2. ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ
3. ಉತ್ತರಿಸುವ ದಿನಾಂಕ : 28-12-2022
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಲೋಕೋಪಯೋಗಿ ಇಲಾಖೆಗೆ ಮಂಜೂರಾಗಿರುವ ಒಟ್ಟು ಅನುದಾನವೆಷ್ಟು; 2022ರ ನವೆಂಬರ್ ಅಂತ್ಯಕ್ಕೆ ಖರ್ಚು ಮಾಡಿರುವ ಹಣವೆಷ್ಟು; | ಲೋಕೋಪಯೋಗಿ ಇಲಾಖೆಗೆ ವಿವಿಧ ಯೋಜನೆಗಳಡಿ ರೂ.9776.67 ಕೋಟಿ ಅನುದಾನ ಒದಗಿಸಲಾಗಿದ್ದು, ನವೆಂಬರ್-2022ರ ಅಂತ್ಯಕ್ಕೆ ರೂ.4963.37 ಕೋಟಿ ವೆಚ್ಚ ಭರಿಸಲಾಗಿರುತ್ತದೆ. |
| ಆ) | ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟಿರುವ ಹಣವೆಷ್ಟು; ಇದರಲ್ಲಿ ಎಷ್ಟು ಕಿಲೋಮೀಟರ್ ರಾಜ್ಯ ಹೆದ್ದಾರಿ ನಿರ್ಮಾಣ ಮಾಡುವ ಗುರಿ ಹೊಂದಲಾಗಿತ್ತು; 2022ರ ನವೆಂಬರ್ ಅಂತ್ಯಕ್ಕೆ ಖರ್ಚಾಗಿರುವ ಅನುದಾನ ಮತ್ತು ಹೊಸದಾಗಿ ನಿರ್ಮಾಣವಾಗಿರುವ ರಸ್ತೆ ಉದ್ದವೆಷ್ಟು; | ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳಿಗೆ 2022-23ನೇ ಸಾಲಿನಲ್ಲಿ ರೂ.4069.00 ಕೋಟಿ ಅನುದಾನ ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ಪ್ರಸಕ್ತ ಸಾಲಿಗೆ 1765 ಕಿ.ಮೀ ಉದ್ದದ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ನವೆಂಬರ್-2022ರ ಅಂತ್ಯಕ್ಕೆ ಒಟ್ಟಾರೆ ರೂ.1894.81 ಕೋಟಿ ವೆಚ್ಚದಲ್ಲಿ 547 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. |
| ಇ) | ಬಜೆಟ್‌ನಲ್ಲಿ ಘೋಷಣೆಯಾದ ನಿಗಧಿತ ಗುರಿ ತಲುಪಲು ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | ಪ್ರಸಕ್ತ ಸಾಲಿಗೆ ನಿಗಧಿಪಡಿಸಿದ ಗುರಿಯನ್ನು ಸಾಧಿಸಲು ಎಂಪಿಕ್ ವೇಳಾಪಟ್ಟಿಯನ್ನು ತಯಾರಿಸಿದ್ದು, ಅದರನ್ವಯ ಪ್ರತಿ ಮಾಹೆಗೆ ಇಲಾಖಾ ಹಂತದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಕಟ್ಟುನಿಟ್ಟಿನ ನಿರ್ದೇಶನಗಳನ್ನು ಅನುಷ್ಠಾನ ಅಧಿಕಾರಿಗಳಿಗೆ ನೀಡಲಾಗುತ್ತಿದೆ. |

**ಲೋಇ/1964/ಐಎಫ್‌ಎ/2022**

**(ಸಿ.ಸಿ ಪಾಟೀಲ)**
**ಲೋಕೋಪಯೋಗಿ ಸಚಿವರು**